Reg No. B-G 155 27-6-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಗಡಿ ಕಲಹ ಪರಿಹಾರಕ್ಕೆ ನಾಯಕ್ ಒತ್ತಾಯ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ಸೆಸಿಬೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀ ನುನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ.ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಮೆಜಾರಿಟಿಯನ್ನು ಲೆಕ್ಕಿಸುಲ್ಲ

ತ್ರಿವೇಂದ್ರಂ— ತಮ್ಮ 'ಸರಿಯಾದ" ನಿಲುವನ್ನು ಒಪ್ಪದಿದ್ದರೆ ಸಂಯುಕ್ತ ರಂಗದ ಮೆಜಾರಿಟಿ ನಿರ್ಧಾರದಂತೆ ತಮ್ಮ ಪಾರ್ಟಿ ನಡೆಯುವದಿಲ್ಲವೆಂದು ಮುಖ್ಯಮಂತ್ರಿ ಶ್ರೀ ನಂಬೂದರಿಪಾದರು ಮತ್ತು ಶ್ರೀ ಎ. ಕೆ. ಗೋಪಾಲ್ ಹೇಳಿದರು.

ಸನ್ಮಾರ್ಗ ಪ್ರವರ್ತನೆ

ಶಿವಮೊಗ್ಗಾ— ಆಚಾರ್ಯ ತುಳಸಿ ಹರಿಜನರ ಕೇರಿಗೆ ಭೇಟಿಕೊಟ್ಟ ಪರಿಣಾಮವಾಗಿ, ಕೆಲವು ಹರಿಜನರು ಮದ್ಯಸೇವನೆ ಮತ್ತು ಧೂಮಪಾನ ತ್ಯಜಿಸಲು ಪ್ರತಿಜ್ಞೆ ಮಾಡಿರುವರು.

★

ಮಳೆ ದೇವರ ಕಳವು

ಮೆಕ್ಸಿಕೊ ತೆನೊಕ್ಟಿಟ್ಲಾಂನ ಗ್ರಾಮದ ಪ್ರವೇಶದ ಹತ್ತಿರ ಅನೇಕ ಶತಮಾನಗಳಿಂದಲೂ ಇದ್ದ ಮಾಕ್ಯೆಲ್‌ಕ್ಸೊಚಿಟಲ್ ಎಂಬ 40 ಪೌಂಡು ತೂಕದ 29ವರೆ ಅಂಗುಲದ ಮಳೆ ದೇವರ ವಿಗ್ರಹವು 4 ದಿನಗಳ ಹಿಂದೆ ಕಳುವಾಗಿದ್ದು, ಗ್ರಾಮದಲ್ಲಿ ಭೀಕರ ಮತ್ತು ಪ್ರವಾಹ ಉಂಟಾಗಿಡೆ – ಅದನ್ನು ಮತ್ತೆ ಅಲ್ಲಿಡಬೇಕೆಂದೂ ಇಲ್ಲದಿದ್ದರೆ ತಾವು ಕೊಚ್ಚಿಹೋಗುವುವೆಂದೂ ಅಲ್ಲಿಯ ಇಂಡಿಯನ್ನರು ಹೇಳುತ್ತಿದಾರೆ.

★

ಪುರಾತನ ನಾಣ್ಯ ಪತ್ತೆ

ನವದೆಹಲಿ— ಔರಂಗಜೇಬನ ಕಾಲದ 1 ಚಿನ್ನದ 176 ಬೆಳ್ಳಿಯ ನಾಣ್ಯಗಳಿದ್ದ ತಾಮ್ರದ ಪಾತ್ರೆ ಕೇಬಲ್ ಹಾಕಲು ಅಗಿಯುತ್ತಿದ್ದಾಗ ಸಿಕ್ಕಿತು.

★

8 ಮಂದಿ ಕೊಲೆ

ಜರ್ಸಿನಗರ— ಒಬ್ಬನು ಒಂದು ಬೇಟಿ ಚೂರಿಯಿಂದ ತನ್ನ ಹೆಂಡತಿ ಮತ್ತು 7 ಮಕ್ಕಳನ್ನು ಇರಿದು ಕೊಂದನು.

ಸತ್ಯಕ್ಕಾಗಿ ಎಲ್ಲವನ್ನೂ ತ್ಯಾಗಮಾಡಬಹುದು ; ಆದರೆ ಯಾತಕ್ಕೂ ಸತ್ಯವನ್ನು ತ್ಯಾಗಮಾಡಲಾಗುವುದಿಲ್ಲ.

— ಸ್ವಾಮಿ ವಿವೇಕಾನಂದರು

ಸಾಲದ ಹೊರೆ

ಹೆಬ್ಬಿ—ಧಾರವಾಡದ ಮುನಿಸಿಪಲ್ ಕಾರ್ಪೊರೇಷನ್ನಿನ ಈಗಿನ ಸಾಲಾ ರೂ. 7934122 ಪೈಸೆ 25 ಎಂದು ಕಮಿಷನರರು ಮಿಾಟಿಂಗಿನಲ್ಲಿ ತಿಳಿಸಿದರು - ಕಳೆದ ವರ್ಷ ರೂ 639177 ಪೈಸೆ 98 ಸಾವತಿ ಮಾಡಲಾಗಿದೆ – ಅಂದರೆ ಈ ಮುನಿಸಿಪಾಲಿಟಿಯ ಪ್ರತಿ ಪೌರರು ತಮ್ಮ ಸಾಲಗಳ ಜೊತೆಗೆ ಮುನಿಸಿಪಲ್ ಸಾಲ ರೂ 26 ಪೈಸೆ 60 ಹೊತ್ತಿರುವರು.

★

ಪ್ರಧಾನಿಯರಿಗೆ ಪಾರಿತೋಷಕ

ಟೋಕಿಯೊ — ಜಪಾನಿನ ಪುರಾತನ ಹೊವನ್ನು ಅಲಂಕರಿಸುವ ಕಲಾ ಪ್ರದರ್ಶನ ವೀಕ್ಷಿಸಿದ ಭಾರತ ಪ್ರಧಾನಿ ಇಂದಿರಾ ರವರಿಗೆ ಉತ್ತರ ಜಪಾನಿನಲ್ಲಿ ಭೂಮಿಯಲ್ಲಿ ಸಿಕ್ಕಿದ 2000 ವರ್ಷಗಳ ಹಿಂದಿನ ಮಣ್ಣಿ ಬೋಗುಣಿಯನ್ನು ಪಾರಿತೋಷಕವಾಗಿ ಕೊಡಲಾಯಿತು

★

ಲೈಂಗಿಕ ಶಿಕ್ಷಣ

ಉಡುಪಿ— ವಿದ್ಯಾಭ್ಯಾಸ ಕಾರ್ಯಕ್ರಮದ ಎಲ್ಲ ಹಂತಗಳಲ್ಲೂ ಲೈಂಗಿಕ ಶಿಕ್ಷಣ ನೀಡೇದು ಡಾ॥ ಮೊಹರ್ದಾಸ್ ಪೈರವರು ಹೇಳಿದರು.

★

ಶಾಂತಿ ಸೈಕಲ್ ರೇಸ್

ಜಿ ಡಿ ಆರ್ ಬರ್ಲಿನ್ನಿನಲ್ಲಿ 22 ನೆ ಶಾಂತಿ ಸೈಕಲ್ ರೇಸು ನಡೆಯಿತು ; 14 ದೇಶಗಳ 97 ಸೈಕಲ್ ಸವಾರರು ಸ್ಪರ್ಧಿಸಿದ್ದರು ; ವಾರ್ಸಾದಿಂದ ಜೆಕೊಸ್ಲೊವೇಕಿಯಾ ಮೂಲಕ ಪೂರ್ವ ಬರ್ಲಿನಿಗೆ 2036 ಕೆ ಎಂ ಉದ್ದದ ಮಾರ್ಗದಲ್ಲಿ ಈ ರೇಸು. 23 ವರ್ಷ ಪೋಲಿಷ್ ಚಾಂಪಿಯರನನು ಜೀಕ್ ಪಿಯರ್ ಪ್ರಥಮ ಸ್ಥಾನ ಪಡೆದನು.

ಸರ್ವಿಗಳ ವತ

ಬೆಂಗಳೂರು— ಬೊಂಬಾಯಿನಿಂದ ವಿಮಾನದಲ್ಲಿ ಬಂದ ಪ್ರಯಾಣೀಕನೊಬ್ಬನಿಂದ ಕೇಂದ್ರ ಎಕ್ಸೈಸಿನವರು ವಶಪಡಿಸಿಕೊಂಡರು.

ಫುಟ್‌ಬಾಲ್ ಪಂಥದ ನಂತರ ಗಲಭೆ

ಇಸ್ತಂಬಾಲ್— ಎರಡು ಟರ್ಕಿ ಫುಟ್‌ಬಾಲ್ ಟೀಂಗಳಲ್ಲಿನ ಪಂಥ ಮುಗಿದನಂತರ ಆದ ಗಲಭೆಯಲ್ಲಿ 3 ಮಂದಿ ಸತ್ತು 40 ಮಂದಿ ಗಾಯಗೊಂಡರು.

ಗಡಿ ವ್ಯಾಜ್ಯ

ಬೊಂಬಾಯಿ— ತಾವು ಡೆಲ್ಲಿಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮಿಾಟಿಂಗಿಗೆ ಹೋಗಿದ್ದಾಗ, ಪ್ರಧಾನಿಯನರೊಡನೆ ವ್ಯವಹಾರಾತ್ಮಕ-ಮೈಸೂರು ಗಡಿ ವ್ಯಾಜ್ಯದ ವಿಚಾರದಲ್ಲಿ ದೀರ್ಘವಾಗಿ ಮಾತುಕತೆ ನಡೆಸಿದುದಾಗಿ ಮುಖ್ಯಮಂತ್ರಿ ನಾಯಿಕ್ ಶಾಸನಸಭೆಯಲ್ಲಿ ತಿಳಿಸಿದರು.

ಸ್ತುತ್ಯ ಕಾರ್ಯ

ಕೂಲಂಬೊ— ಭಾರತ ಚಲಚ್ಚಿತ್ರಗಳ ಆಮದನ್ನು ಪ್ರತಿಬಂಧಿಸಬೇಕೆಂಬ ಡಿಎಂಕೆಯನ್ನು ನಿಷೇಧಿಸಬೇಕೆಂಬ ಕೇಳಿಕೆಯನ್ನು ಪ್ರಧಾನಿ ಡಡ್ಲಿ ಸೇನೆನಾಯಕರು ತಿರಸ್ಕರಿಸಿರುವರು.

ನದಿಗೆ ಇಂಜೆಕ್ಷನ್

ಪೋಲೆಂಡಿನ ಓಸಿಸಿಂನಲ್ಲಿಯ ರಸಾಯನಿಕ ಯಂತ್ರಾಗಾರದ ಪಕ್ಕದಲ್ಲಿ ಹರಿಯುವ ವಿಸ್ತುಲಾ ನದಿಯ ನೀರನ್ನು ಶುದ್ಧಿಗೊಳಿಸಲು ಆಮ್ಲಜನಕವು ಪಂಪು ಮಾಡಲಡುವದು.

ಪುಸ್ತಕ ಸಂತೆ

ವಾರ್ಸಾದಲ್ಲಿ ನಡೆದ ಆಂತರರಾಷ್ಟ್ರೀಯ ಪುಸ್ತಕ ಸಂತೆಯಲ್ಲಿ 26 ದೇಶಗಳ 2200 ಪ್ರಕಟಣಕಾರರು 60000 ಪುಸ್ತಕಗಳನ್ನಿಟ್ಟಿದ್ದರು.

●

ಪ್ರಕಟಣೆ

ಮೈಸೂರು ಪುರಸಭಾ ಉಚಿತ ವಿದ್ಯಾರ್ಥಿನಿಲಯದಲ್ಲಿ ಊಟ ಮತ್ತು ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲು, ಬಡ ವಿದ್ಯಾರ್ಥಿಗಳಿಂದ ವಿಧಾಯಕವಾದ ಫಾರಂನಲ್ಲಿ ಅರ್ಜಿಗಳನ್ನು ತಾ ॥ 20-7-69 ನೇ ಮಧ್ಯಾಹ್ನ 4 ಗಂಟೆವರೆಗೆ ಸ್ವೀಕರಿಸಲಾಗುತ್ತೆ : ಇಷ್ಟವುಳ್ಳವರು ತಾ ॥ 1-7-69 ರಿಂದ ಮುನಿಸಿಪಲ್ ಆಫೀಸಿನಲ್ಲಿ ಅರ್ಜಿಗಳನ್ನು 6 ಪೈಸೆ ಪಾವತಿಮಾಡಿ ಪಡೆದು ಸಕಾಲದಲ್ಲಿ ತಲಪಿಸತಕ್ಕದ್ದು.

ಮೈಸೂರು ಸಿಟಿ ಮುನಿಸಿಪಲ್ ಲೇಬರ್ ಯೂನಿಯನ್

ಮೇಲ್ಕಂಡ ಸಂಘದ ಆಶ್ರಯದಲ್ಲಿ ತಾ॥ 25 ರಂದು ಟೌನ್‌ಹಾಲ್ ಮೈದಾನದಲ್ಲಿ ಶ್ರೀ ತ್ರೀ ತಿಮ್ಮೇಗೌಡರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಇದಕ್ಕೆ ಮುಂಬೆ ನಗರದಲ್ಲಿ ಕೆಲಸಗಾರರು ಮೆರವಣಿಗೆ ನಡೆಸಿದರು. ಕೆಲವರು ಭಾಷಣ ಮಾಡಿದರು. ಕೆಲಸಗಾರರ ಬೇಡಿಕೆಗಳನ್ನು ಈಡೇರಿಸಬೇಕೆಂದೂ, ಮತ್ತಿತರ ವಿಷಯುಗಳು ನೆರವೇರಬೇಕೆಂದೂ ಒತ್ತಾಯು ಮಾಡಲಾಯಿತು.

ಮತಾಂತರ

ಭಾರತದಲ್ಲಿ ಬೌದ್ಧ ರಾಜರ ಪ್ರಭಾವದಲ್ಲಿ ಭಾರತದಲ್ಲಿ ಸುಮಾರು ೫ನೇ ಶತಕದ 80 ಮಂದಿ ಬೌದ್ಧ ಮತಕ್ಕೆ ಮತಾಂತರಗೊಂಡಿದ್ದರೆಂದೂ, ಇಂತಹವರ ವಂಶೀಯರನ್ನು ಹಿಂದೂಮತಕ್ಕೆ ಶ್ರೀ ಆದಿಶಂಕರರು ಸೇರಿಸಿದರೆಂದೂ ಅನೇಕ ಆಧಾರಗಳು ವ್ಯಕ್ತಪಡಿಸುತ್ತವೆ. ಒಂದು ಪರ್ಷಿಯನ್ ಪುಸ್ತಕದ ಆಧಾರದ ಮೇಲೆ ಶ್ರೀ ಕೆ ಎಂ ಮುನ್ಷಿಯವರು ತಮ್ಮ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ— ಸುಲ್ತಾನ್ ಘಜನಿ ಮಹಮೂದನು ಸೋಮನಾಥ ದೇವಾಲಯದಲ್ಲಿ ಮಾಡಿದ ಲೂಟಿಯೊಡನೆ ವಾಪಸ್ಸಾಗುತ್ತಿದ್ದಾಗ ಗುರ್ಜರನೇಶದ ಅಡವಿಯೆಲ್ಲಿ ಅವರನ್ನು ರಾಜಪುತ್ರರೂ ಜಾಟರೂ ಎದುರಿಸಿ, ಹಲವು ಸಾವಿರ ಮುಸ್ಲಿಂ ಸೈನಿಕರನ್ನು ಸೆರೆಹಿಡಿದರೆಂದೂ, ನಂತರ ಈ ಮುಸ್ಲಿಮರನ್ನು ಹಿಂದೂಮತಕ್ಕೆ ತೆಗೆದುಕೊಳ್ಳಲಾಯಿತೆಂದೂ ಪ್ರಕಟಿಸಿರುವರು. ಶ್ರೀ ಜವಹರ ನೆಹ್ರೂರವರೂ ತಮ್ಮ ಭಾರತ ದರ್ಶನ ಗ್ರಂಥದಲ್ಲಿ ಈ ವಿಷಯ ಬರೆದಿದ್ದಾರೆ.



Protect the Cow

SHAKTI SUDHA

A Superb Tonic

ಪುಡ್‌ಲ್ಯಾಂಡ್ಸ್ ಜಯಿಸ್ಪದ 6 ನೇ ವಾರ

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ
.... ನೋಡಲು ತಪ್ಪಬೇಡಿ ....

ದುನಿಯಾ Duniya

ಪಾತ್ರ– ದೇವಾನಂದ್, ವೈಜಯಂತಿಮಾಲಾ, ಜಾನಿವಾಕರ್, ಬಾಲರಾಜ್ ಸಹಾನಿ
ತಾ॥ 23-5-69 ರಿಂದ ಪ್ರವೇಶದರಗಳನ್ನು ಕೆಳಗೆನಮೂದಿಸಿರುವಂತೆ ಬದಲಾಯಿಸಿದೆ
ಬಾಕ್ಸ್ ರೂ 2-90, ಬಾಲ್ಕನಿ ರೂ 2-05, ಕೆಳಗೆಡೆ ರೂ 1-20, 0-75

[ದಿನಕ್ಕೆ 3 ಪ್ರದರ್ಶನಗಳು]

ಆಪೆರಾ 27-6-69 ರಿಂದ

— ಸಕಲರೂ ನೋಡಿ ಆನಂದಿಸಬೇಕಾದ ಅಮೋಘ ಕನ್ನಡ ಚಿತ್ರ —

ಮಕಳೇ ಮನೆಗೆ ಮಾಣಿಕ

ನಟವರ್ಗ— ಉದಯಕುಮಾರ್, ಬಿ. ವಿ. ರಾಧಾ, ಆದವಾನಿ ಲಕ್ಷ್ಮಿದೇವಿ, ಶೈಲಶ್ರೀ, ಜಯ, ದಿನೇಶ್, ಮಾಸ್ಟರ್, ಕೃಷ್ಣಕುಮಾರ್, ಬೇಬಿ ಪ್ರತಾಪ
ದಿನಕ್ಕೆ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basavish Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M. S. Krishna Rao (Proprietor) at the Satyavadi Press Chamarajapuram, Mysore 4